## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಬೆಂಗಳೂರು ನಗರ ಜಿಲ್ಲೆಯ ವ್ಯಾಪ್ತಿಯಲ್ಲಿ ವಿವಿಧ ಗ್ರಾಮಗಳ ವಿವಿಧ ಸರ್ವೆ ನಂಬರ್‌ಗಳಲ್ಲಿ ಒಟ್ಟು 431.11 ಎಕರೆ ಸರ್ಕಾರಿ ಗೋಮಾಳ ಮತ್ತು ಸರ್ಕಾರಿ ಖರಾಬು ವರ್ಗೀಕರಣಗಳ ಜಮೀನುಗಳನ್ನು "ಬೆಂಗಳೂರು ಒಂದು ಲಕ್ಷ ಬಹುಮಹಡಿ ವಸತಿ ಯೋಜನೆ" ಯನ್ನು ಅನುಷ್ಠಾನಗೊಳಿಸಲು ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ, ಬೆಂಗಳೂರು ಇವರಿಗೆ ಉಚಿತವಾಗಿ ಮಂಜೂರು ಮಾಡುವ ಬಗ್ಗೆ.

ಓದಲಾಗಿದೆ: 1. ಜಿಲ್ಲಾಧಿಕಾರಿ, ಬೆಂಗಳೂರು ನಗರ ಜಿಲ್ಲೆ ಇವರ ದಿನಾಂಕ: 18-08-2017, 19-08-2017, 21-08-2017 ಮತ್ತು 22-08-2017ರ ಪತ್ರಗಳು.
2. ರಾಜೀವ್‌ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ ಇವರ ಪತ್ರಗಳು, ಸಂಖ್ಯೆ: ಆರ್‌ಜಿಆರ್‌ಹೆಚ್‌ಸಿಎಲ್/07/ವಿಎಸ್‌ಎಲ್/06/2017, ದಿನಾಂಕ:21-04-2017, 09-06-2017 05-07-2017 ಮತ್ತು 25-09-2017.

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮಸಂಖ್ಯೆ (1)ರ ಜಿಲ್ಲಾಧಿಕಾರಿ, ಬೆಂಗಳೂರು ನಗರ ಜಿಲ್ಲೆ, ಇವರ ಪ್ರಸ್ತಾವನೆಗಳಲ್ಲಿ ಬೆಂಗಳೂರು ನಗರ ಜಿಲ್ಲೆಯಲ್ಲಿ ಒಂದು ಲಕ್ಷ ವಸತಿ ಯೋಜನೆಯನ್ನು ಅನುಷ್ಠಾನಗೊಳಿಸಲು ರಾಜೀವ್‌ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ ಇವರಿಗೆ ಜಮೀನು ಮಂಜೂರು ಮಾಡುವ ವಿಚಾರವಾಗಿ ಮಾನ್ಯ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ದಿನಾಂಕ: 05-07-2017ರಂದು ನಡೆದ ಸಭೆಯಲ್ಲಿ ತೀರ್ಮಾನವಾದಂತೆ ಹಾಗೂ ಬೆಂಗಳೂರು ನಗರ ಜಿಲ್ಲೆಯ, ಬೆಂಗಳೂರು ದಕ್ಷಿಣ, ಬೆಂಗಳೂರು ಪೂರ್ವ, ಬೆಂಗಳೂರು ಉತ್ತರ, ಬೆಂಗಳೂರು ಉತ್ತರ (ಅಪರ) ಮತ್ತು ಆನೇಕಲ್ ತಾಲ್ಲೂಕುಗಳ ವಿವಿಧ ಗ್ರಾಮಗಳಲ್ಲಿ ಲಭ್ಯವಿರುವ ಒಟ್ಟು 767-16 ಎಕರೆ/ಗುಂಟೆ ಜಮೀನುಗಳನ್ನು ಮಂಜೂರು ಮಾಡುವ ಕುರಿತು ಪ್ರಸ್ತಾಪಿಸಿದ್ದಾರೆ. ಸದರಿ ಪ್ರಸ್ತಾವನೆಯಲ್ಲಿನ ಜಮೀನುಗಳಲ್ಲಿ 97-28 ಎಕರೆ/ಗುಂಟೆ ಜಮೀನುಗಳು ಜಲಕಾಯ ಮತ್ತು ಬೀಳು ಜಮೀನುಗಳಾಗಿದ್ದು, ಸದರಿ ತರಹೆ ಜಮೀನುಗಳನ್ನು ಹೊರತುಪಡಿಸಿ, 669.28 ಎಕರೆ/ಗುಂಟೆ ಜಮೀನನ್ನು ಮಂಜೂರು ಮಾಡುವ ಕುರಿತು ತಾಲ್ಲೂಕುವಾರು, ಗ್ರಾಮವಾರು, ಸರ್ವೆ ನಂಬರ್‌ವಾರು ಹಾಗೂ ವಿಸ್ತೀರ್ಣವಾರು ತರಹೆಗಳ ವಿವರಗಳನ್ನು ಸಲ್ಲಿಸಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಪತ್ರದಲ್ಲಿ ದಿನಾಂಕ:25-09-2017ರ ರಾಜೀವ್‌ಗಾಂದಿ ಗ್ರಾಮೀಣ ವಸತಿ ನಿಗಮ ನಿಯಮಿತವು ಪ್ರಸ್ತಾಪಿತ 669-28 ಎಕರೆ/ಗುಂಟೆ ಜಮೀನುಗಳ ಭೌತಿಕ ತಪಾಸಣೆಯನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬಿಎಂ.ಆರ್‌ಡಿಎ ಮತ್ತು ಲೋಕೋಪಯೋಗಿ ಇಲಾಖೆಗಳ ಅಧಿಕಾರಿಗಳ ನೇತೃತ್ವದ ನಾಲ್ಕು ತಂಡವು ನಡೆಸಲಾಗಿರುತ್ತದೆ ಎಂದು ತಿಳಿಸಿರುತ್ತಾರೆ. ಪ್ರಸ್ತಾಪಿತ ವಸತಿ ಯೋಜನೆಯನ್ನು ಕಾರ್ಯರೂಪಗೊಳಿಸಲು ಅನುವಾಗುವಂತೆ ಪ್ರಸ್ತಾಪಿತ 669-28 ಎಕರೆ/ಗುಂಟೆ ಪೈಕಿ 431-11 ಎಕರೆ/ಗುಂಟೆ ಜಮೀನು ಮಾತ್ರವೇ ವಸತಿ ಯೋಜನೆ ಕೈಗೊಳ್ಳಲು ಅರ್ಹವಾಗಿರುತ್ತದೆಯೆಂದು ತಿಳಿಸಿರುತ್ತದೆ.

ಮುಂದುವರೆದು, ಜಿಲ್ಲಾಧಿಕಾರಿ, ಬೆಂಗಳೂರು ನಗರ ಜಿಲ್ಲೆ ಇವರು ಸಲ್ಲಿಸಿರುವ ಪ್ರಸ್ತಾವನೆಯಂತೆ ವಸತಿ ಯೋಜನೆಗೆ ಯೋಗ್ಯವಿರುವಂತಹ ಜಮೀನುಗಳ ವಿವರಗಳನ್ನು ಈ ಕೆಳಗಿನಂತೆ ನೀಡಿರುತ್ತದೆ.

| ಭಾಗ-1: ಸರ್ಕಾರಿ ಗೋಮಾಳ ಜಮೀನುಗಳ ವಿವರ: | | | | | |
|---|---|---|---|---|---|
| ಕ್ರಸಂ | ತಾಲ್ಲೂಕು | ಹೋಬಳಿ | ಗ್ರಾಮ | ಸ.ನಂ. | ವಿಸ್ತೀರ್ಣ ಎಕರೆ/ಗುಂಟೆ |
| 1 | 2 | 3 | 4 | 5 | 6 |
| 1 | ಬೆಂಗಳೂರು ಪೂರ್ವ | ಬಿದರಹಳ್ಳಿ | ಬಿದರಹಳ್ಳಿ | 193 | 20.00 |

| | | | | | |
|---|---|---|---|---|---|
| 2 | ಬೆಂಗಳೂರು ಪೂರ್ವ | ಬಿದರಹಳ್ಳಿ | ಮಂಡೂರು | 155 | 131.07 |
| 3 | ಬೆಂಗಳೂರು ಪೂರ್ವ | ಕೆ.ಆರ್.ಪುರ | ಕ್ಯಾಲಸನಹಳ್ಳಿ | 15 | 4.07 |
| 4 | ಬೆಂಗಳೂರು ಪೂರ್ವ | ಕೆ.ಆರ್.ಪುರ | ನಗರೇಶ್ವರ/ನಾಗೇನಹಳ್ಳಿ | 13 | 6.22 |
| 5 | ಬೆಂಗಳೂರು ಉತ್ತರ | ಜಾಲಾ | ಚಿಕ್ಕಜಾಲಾ | 76/ಪಿ4 | 1.00 |
| 6 | ಬೆಂಗಳೂರು ಉತ್ತರ | ಜಾಲಾ | ಮಾರೇನಹಳ್ಳಿ | 173/ಪಿ9 | 2.10 |
| 7 | ಬೆಂಗಳೂರು ಉತ್ತರ | ಜಾಲಾ | ಮಹದೇವ ಕೋಡಿಗೆಹಳ್ಳಿ | 119/ಪಿ5 | 4.00 |
| 8 | ಬೆಂಗಳೂರು ಉತ್ತರ | ಜಾಲಾ | ಚಿಕ್ಕಜಾಲ | 76/ಪಿ7 | 4.00 |
| 9 | ಬೆಂಗಳೂರು ಉತ್ತರ | ಜಾಲಾ | ಕುದುರೆಗೆರೆ | 59 | 2.00 |
| 10 | ಬೆಂಗಳೂರು ಉತ್ತರ | ದಾಸನಪುರ | ಪಿಳ್ಳಹಳ್ಳಿ | 53 | 8.00 |
| 11 | ಬೆಂಗಳೂರು ಉತ್ತರ | ದಾಸನಪುರ | ತೋಟಗೆರೆ | 13 | 13.27 |
| 12 | ಬೆಂಗಳೂರು ಉತ್ತರ | ದಾಸನಪುರ | ಬೊಮ್ಮಶೆಟ್ಟಿಹಳ್ಳಿ | 63 | 5.00 |
| 13 | ಬೆಂಗಳೂರು ಉತ್ತರ | ಜಾಲ | ಹುಣಸಮಾರನಹಳ್ಳಿ | 179 | 5.00 |
| 14 | ಬೆಂಗಳೂರು ಉತ್ತರ(ಅ) | ಹೆಸರಘಟ್ಟ | ಸಾದೇನಹಳ್ಳಿ | 64 | 1.12 |
| 15 | ಬೆಂಗಳೂರು ದಕ್ಷಿಣ | ಬೇಗೂರು | ದೊಡ್ಡ ನಾಗಮಂಗಲ | 11 | 6.20 |
| 16 | ಬೆಂಗಳೂರು ದಕ್ಷಿಣ | ಬೇಗೂರು | ಹುಳಿಮಾವು | 49 | 2.16 |
| 17 | ಬೆಂಗಳೂರು ದಕ್ಷಿಣ | ಉತ್ತರಹಳ್ಳಿ | ಅರೇಹಳ್ಳಿ | 28 | 17.00 |
| 18 | ಬೆಂಗಳೂರು ದಕ್ಷಿಣ | ಉತ್ತರಹಳ್ಳಿ | ನೆಲಗುಳಿ | 145 | 22.16 |
| 19 | ಬೆಂಗಳೂರು ದಕ್ಷಿಣ | ಕೆಂಗೇರಿ | ಕೆಂಚನಪುರ | 63 | 10.12 |
| 20 | ಬೆಂಗಳೂರು ದಕ್ಷಿಣ | ಕೆಂಗೇರಿ | ಕುಂಬಳಗೂಡು | 98 | 1.20 |
| 21 | ಬೆಂಗಳೂರು ದಕ್ಷಿಣ | ತಾವರೆಕೆರೆ | ಮುದ್ದಯ್ಯನ ಪಾಳ್ಯ | 28 | 5.00 |
| 22 | ಬೆಂಗಳೂರು ದಕ್ಷಿಣ | ತಾವರೆಕೆರೆ | ಚುಂಚನಕುಪ್ಪೆ | 43 | 15.00 |
| 23 | ಆನೇಕಲ್ | ಸರ್ಜಾಪುರ | ಬನಹಳ್ಳಿ | 31 | 5.00 |
| 24 | ಆನೇಕಲ್ | ಸರ್ಜಾಪುರ | ಯಮರೆ | 195 | 5.12 |
| 25 | ಆನೇಕಲ್ | ಸರ್ಜಾಪುರ | ಚಿಕ್ಕನಹಳ್ಳಿ– ಕಾಮನಹಳ್ಳಿ | 71 | 3.00 |
| 26 | ಆನೇಕಲ್ | ಸರ್ಜಾಪುರ | ಬಿಕ್ಕನಹಳ್ಳಿ | 18 | 2.00 |
| 27 | ಆನೇಕಲ್ | ಸರ್ಜಾಪುರ | ಕಾಡಅಗ್ರಹಾರ | 30 | 3.15 |
| 28 | ಆನೇಕಲ್ | ಸರ್ಜಾಪುರ | ಯಮರೆ | 88 | 5.00 |
| 29 | ಆನೇಕಲ್ | ಸರ್ಜಾಪುರ | ಕೂತಗಾನಹಳ್ಳಿ | 67 | 15.00 |
| 30 | ಆನೇಕಲ್ | ಸರ್ಜಾಪುರ | ಕೂತಗಾನಹಳ್ಳಿ | 68 | 5.00 |
| 31 | ಆನೇಕಲ್ | ಸರ್ಜಾಪುರ | ರಾಮನಾಯಕನಹಳ್ಳಿ | 29 | 1.14 |
| 32 | ಆನೇಕಲ್ | ಸರ್ಜಾಪುರ | ಗೂಳಿಮಂಗಲ | 67 | 3.00 |
| 33 | ಆನೇಕಲ್ | ಜಿಗಣಿ | ಎಸ್.ಬಿಂಗೀಪುರ | 179 | 5.00 |
| 34 | ಆನೇಕಲ್ | ಜಿಗಣಿ | ಕೊಪ್ಪ | 110 | 2.10 |
| 35 | ಆನೇಕಲ್ | ಜಿಗಣಿ | ಎಸ್.ಬಿಂಗೀಪುರ | 154 | 8.00 |
| 36 | ಆನೇಕಲ್ | ಕಸಬಾ | ಮೇಣಸಿಗನಹಳ್ಳಿ | 145 | 2.00 |
| 37 | ಆನೇಕಲ್ | ಕಸಬಾ | ಕುಂಬಾರನಹಳ್ಳಿ | 19 | 2.00 |

| | | | | | |
|---|---|---|---|---|---|
| 38 | ಆನೇಕಲ್ | ಕಸಬಾ | ಲಿಂಗಾಪುರ | 112 | 5.00 |
| 39 | ಆನೇಕಲ್ | ಕಸಬಾ | ಅರವಂಟಿಗೆಪುರ | 47 | 3.00 |
| 40 | ಆನೇಕಲ್ | ಕಸಬಾ | ಆನೇಕಲ್ ಗ್ರಾಮಾಂತರ | 509 | 19.20 |
| | | | | ಒಟ್ಟು | 383.00 |
| **ಭಾಗ-2: ಸರ್ಕಾರಿ ಖರಾಬು ಜಮೀನಿನ ವಿವರ:** | | | | | |
| 1 | ಬೆಂಗಳೂರು ಪೂರ್ವ | ಕೆ.ಆರ್.ಪುರ | ಹೊರಮಾವು-ಅಗರ | 104/1 | 2.25 |
| 2 | ಬೆಂಗಳೂರು ದಕ್ಷಿಣ | ಬೇಗೂರು | ನ್ಯಾನಪ್ಪನಹಳ್ಳಿ | 39 | 6.17 |
| 3 | ಬೆಂಗಳೂರು ದಕ್ಷಿಣ | ಉತ್ತರಹಳ್ಳಿ | ವಡ್ಡರಪಾಳ್ಯ | 38 | 19.22 |
| 4 | ಬೆಂಗಳೂರು ದಕ್ಷಿಣ | ಕೆಂಗೇರಿ | ಭೀಮನಕುಪ್ಪೆ | 118 | 2.09 |
| 5 | ಆನೇಕಲ್ | ಸರ್ಜಾಪುರ | ಹೆಗ್ಗೊಂಡನಹಳ್ಳಿ | 37 | 4.02 |
| 6 | ಆನೇಕಲ್ | ಸರ್ಜಾಪುರ | ಹೆಗ್ಗೊಂಡನಹಳ್ಳಿ | 4 | 3.05 |
| 7 | ಆನೇಕಲ್ | ಸರ್ಜಾಪುರ | ಕೂಗೂರು | 69 | 2.06 |
| 8 | ಆನೇಕಲ್ | ಜಿಗಣಿ | ಶಿವನಹಳ್ಳಿ | 172 | 3.05 |
| 9 | ಆನೇಕಲ್ | ಕಸಬಾ | ಇಂಡ್ಲವಾಡಿ | 237 | 5.00 |
| | | | | ಒಟ್ಟು | 48.11 |
| | **Grand Total** | ಭಾಗ-1 & ಭಾಗ-2 – 383.00 + 48.11 | | = | 431.11 ಎ/ಗು |

ಮುಂದುವರೆದು, ಮೇಲ್ಕಂಡಂತೆ ಬೆಂಗಳೂರು ನಗರ ಜಿಲ್ಲೆಯ ವ್ಯಾಪ್ತಿಯಲ್ಲಿ ವಿವಿಧ ಗ್ರಾಮಗಳ ವಿವಿಧ ಸರ್ವೆ ನಂಬರ್‌ಗಳಲ್ಲಿ ಒಟ್ಟು 431.11 ಎಕರೆ ಸರ್ಕಾರಿ ಗೋಮಾಳ ಮತ್ತು ಸರ್ಕಾರಿ ಖರಾಬು ವರ್ಗೀಕರಣಗಳ ಜಮೀನುಗಳನ್ನು "ಬೆಂಗಳೂರು ಒಂದು ಲಕ್ಷ ಬಹುಮಹಡಿ ವಸತಿ ಯೋಜನೆ" ಯನ್ನು ಅನುಷ್ಠಾನಗೊಳಿಸಲು ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ, ಬೆಂಗಳೂರು ಇವರಿಗೆ ಉಚಿತವಾಗಿ ಮಂಜೂರು ಮಾಡಲು ತೀರ್ಮಾನಿಸಲಾಗಿದೆ.

ಜಿಲ್ಲಾಧಿಕಾರಿ, ಬೆಂಗಳೂರು ನಗರ ಜಿಲ್ಲೆ ಇವರು ಹಾಗೂ ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ಇವರ ಪ್ರಸ್ತಾವನೆಗಳನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ ಆರ್‌ಡಿ 229 ಎಲ್‌ಜಿಬಿ 2017,**
**ಬೆಂಗಳೂರು ದಿನಾಂಕ: 15-11-2017**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಬೆಂಗಳೂರು ನಗರ ಜಿಲ್ಲೆಯ ವ್ಯಾಪ್ತಿಯಲ್ಲಿ ವಿವಿಧ ಗ್ರಾಮಗಳ ವಿವಿಧ ಸರ್ವೆ ನಂಬರ್‌ಗಳಲ್ಲಿ ಒಟ್ಟು 431.11 ಎಕರೆ ಸರ್ಕಾರಿ ಗೋಮಾಳ ಮತ್ತು ಸರ್ಕಾರಿ ಖರಾಬು ವರ್ಗೀಕರಣಗಳ ಜಮೀನುಗಳನ್ನು "ಬೆಂಗಳೂರು ಒಂದು ಲಕ್ಷ ಬಹುಮಹಡಿ ವಸತಿ ಯೋಜನೆ" ಯನ್ನು ಅನುಷ್ಠಾನಗೊಳಿಸಲು ಕರ್ನಾಟಕ ಭೂ ಮಂಜೂರಾತಿ ನಿಯಮಗಳು, 1969ರ ನಿಯಮ 22ಎ(3)(iii)ರ ಮೇರೆಗೆ ವಸತಿ ರಹಿತರ ವಸತಿ ಉದ್ದೇಶಗಳಿಗಾಗಿ ಈ ಕೆಳಕಂಡ ಷರತ್ತಿಗೊಳಪಟ್ಟು ಉಚಿತವಾಗಿ ಮಂಜೂರು ಮಾಡಿ ಆದೇಶಿಸಿದೆ.

1. ಪ್ರಸ್ತಾಪಿತ ಒಟ್ಟು 431-11 ಎಕರೆ ಸರ್ಕಾರಿ ಗೋಮಾಳದ ಪೈಕಿ 383.00 ಎಕರೆ/ಗುಂಟೆ ಸರ್ಕಾರಿ ಗೋಮಾಳ ವರ್ಗೀಕರಣದಲ್ಲಿ ಬರುವ ಜಮೀನುಗಳನ್ನು ಕರ್ನಾಟಕ ಭೂ ಕಂದಾಯ ನಿಯಮಗಳು, 1966ರ ನಿಯಮ 97(4)ರಡಿಯಲ್ಲಿ ಗೋಮಾಳ ಲೆಕ್ಕಶೀರ್ಷಿಕೆಯಿಂದ ತಗ್ಗಿಸಲು ಕ್ರಮವಹಿಸುವಂತೆ ಹಾಗೂ ಬಾಕಿ 48.11 ಎಕರೆ/ಗುಂಟೆ ಸರ್ಕಾರಿ ಖರಾಬು ವರ್ಗೀಕರಣದಲ್ಲಿರುವ ಜಮೀನುಗಳನ್ನು ಕರ್ನಾಟಕ ಭೂ ಕಂದಾಯ

ಕಾಯ್ದೆ, 1964ರ ಕಲಂ 68 ರಡಿಯಲ್ಲಿ ಪ್ರಕ್ರಿಯೆ ನಡೆಸಿದ ನಂತರ ರಾಜೀವ್ ಗಾಂಧಿ ವಸತಿ ನಿಗಮ ನಿಯಮಿತ, ಬೆಂಗಳೂರು ಇವರಿಗೆ ಹಸ್ತಾಂತರಿಸಲು ಕ್ರಮವಹಿಸುವುದು.

2. ಸದರಿ ಜಮೀನನ್ನು ಯಾವ ಉದ್ದೇಶಕ್ಕೆ ಮಂಜೂರು ಮಾಡಲಾಗಿದಯೋ, ಅದೇ ಉದ್ದೇಶಕ್ಕಾಗಿ ಮಾತ್ರ ಎರಡು ವರ್ಷಗಳ ಅವಧಿಯೊಳಗೆ ಉಪಯೋಗಿಸತಕ್ಕದ್ದು.
3. ಮಂಜೂರಾಗಿರುವ ಜಮೀನಿನಲ್ಲಿ ಯಾವುದೇ ರೀತಿಯ ಅತಿ ಕ್ರಮಣವಾಗದಂತೆ ಕ್ರಮವಹಿಸುವುದು.
4. ಮಂಜೂರಾತಿ ಜಮೀನಿನ ಮೇಲೆ ಯಾವುದೇ ನ್ಯಾಯಾಲಯದಲ್ಲಿ ದಾವೆ ದಾಖಲಾಗಿದ್ದಲ್ಲಿ ಈ ಮಂಜೂರಾತಿ ನ್ಯಾಯಾಲಯದ ಅಂತಿಮ ತೀರ್ಪಿಗೆ ಒಳಪಟ್ಟಿರುತ್ತದೆ.
5. ಮಂಜೂರಾದ ಜಮೀನಿನಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಆರಂಭಿಸುವ ಪೂರ್ವದಲ್ಲಿ ಶಾಸನ ಬದ್ಧವಾಗಿ ಪಡೆಯಬೇಕಾದ ಪರವಾನಗಿಯನ್ನು ಸಂಬಂಧಿಸಿದ ಪ್ರಾಧಿಕಾರಗಳಿಂದ ಪಡೆಯುವುದು ಹಾಗೂ ನಿಯಮಾನುಸಾರ ಪಾವತಿಸಬೇಕಾದ ಶುಲ್ಕಗಳನ್ನು ಕಡ್ಡಾಯವಾಗಿ ಪಾವತಿಸುವುದು.
6. ಮಂಜೂರಾದ ಜಮೀನು ಕರ್ನಾಟಕ ಭೂ ಮಂಜೂರಾತಿ ನಿಯಮಗಳು, 1969ರ ನಿಯಮಗಳಿಗೆ ಬದ್ಧವಾಗಿದ್ದು, ಸದರಿ ನಿಯಮಗಳ ಉಲ್ಲಂಘನೆಯಾದಲ್ಲಿ, ಈ ಮಂಜೂರಾತಿ ಆದೇಶವನ್ನು ರದ್ದುಪಡಿಸಿ, ಮಂಜೂರಾದ ಜಮೀನನ್ನು ಯಾವುದೇ ಪರಿಹಾರ ನೀಡದೆ ಸರ್ಕಾರದ ವಶಕ್ಕೆ ಪಡೆಯಲಾಗುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

16.11.17
(ಎಸ್.ಎಲ್.ಮಹಾಂತೇಗೌಡ)
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ಭೂಮಂಜೂರಾತಿ-1)
16/11/17

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ವಿಕಾಸಸೌಧ ಘಟಕ, ವಿಕಾಸಸೌಧ, ಬೆಂಗಳೂರು (ಇದನ್ನು ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಪ್ರಕಟಿಸಿ 50 ಪ್ರತಿಗಳನ್ನು ಒದಗಿಸುವಂತೆ ಕೋರಿದೆ)

**ಇವರಿಗೆ,**

1. ಮಹಾಲೇಖಪಾಲರು (ಎ ಮತ್ತು ಇ, ಲೆಕ್ಕಪರಿಶೋಧನೆ-1 ಮತ್ತು 2) ಕರ್ನಾಟಕ, ಬೆಂಗಳೂರು.
2. ಪ್ರಾದೇಶಿಕ ಆಯುಕ್ತರು, ಬೆಂಗಳೂರು ವಿಭಾಗ, ಬೆಂಗಳೂರು.
3. ಜಿಲ್ಲಾಧಿಕಾರಿ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು.
4. ಸರ್ಕಾರದ ಮುಖ್ಯ ಕಾರ್ಯದರ್ಶಿಯವರ, ಆಪ್ತ ಕಾರ್ಯದರ್ಶಿ (**ಸಚಿವ ಸಂಪುಟ ವಿಷಯ ಸಂಖ್ಯೆ: 730/2017**) ವಿಧಾನಸೌಧ, ಬೆಂಗಳೂರು.
5. ಸರ್ಕಾರದ ಉಪ ಕಾರ್ಯದರ್ಶಿ, ವಸತಿ ಇಲಾಖೆ, ವಿಕಾಸಸೌಧ, ಬೆಂಗಳೂರು.
6. ವ್ಯವಸ್ಥಾಪಕ ನಿರ್ದೇಶಕರು, ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ, ಬೆಂಗಳೂರು.
7. ಉಪ ವಿಭಾಗಾಧಿಕಾರಿ, ಬೆಂಗಳೂರು ದಕ್ಷಿಣ/ಉತ್ತರ ಉಪ ವಿಭಾಗಗಳು, ಬೆಂಗಳೂರು.
8. ಸರ್ಕಾರದ ಅಧೀನ ಕಾರ್ಯದರ್ಶಿ, ಕಾನೂನು ಇಲಾಖೆ, ವಿಧಾನಸೌಧ, ಬೆಂಗಳೂರು.
9. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-7), ವಿಧಾನಸೌಧ, ಬೆಂಗಳೂರು.
10. ತಹಶೀಲ್ದಾರ್, ಬೆಂಗಳೂರು ದಕ್ಷಿಣ/ ಬೆಂಗಳೂರು ಉತ್ತರ / ಬೆಂಗಳೂರು ಪೂರ್ವ/ ಬೆಂಗಳೂರು ಉತ್ತರ(ಅಪರ)/ಆನೇಕಲ್ ತಾಲ್ಲೂಕುಗಳು.
11. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

**ಪ್ರತಿಯನ್ನು ಮಾಹಿತಿಗಾಗಿ:**

1. ಸನ್ಮಾನ್ಯ ಮುಖ್ಯಮಂತ್ರಿಯವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು